ಊ) ಬಿಜಾಪುರ ಜಿಲ್ಲೆಯಲ್ಲಿ ರೈತರ ಕಬ್ಬನ್ನು ಖರೀದಿಸದೇ ಇರುವ ಕಾರ್ಖಾನೆಗಳು ಯಾವುವು ಇರುವುದಿಲ್ಲ ಲಭ್ಯವಿರುವ ಹೆಚ್ಚುವರಿ ಕಬ್ಬನ್ನು ಅಕ್ಕ ಪಕ್ಕದ ಜಿಲ್ಲೆಯ ಕಾರ್ಖಾನೆಗಳು ನುರಿಸುವಂತೆ ಈಗಾಗಲೇ ಆದೇಶ ಹೊರಡಿಸಲಾಗಿದೆ

1633 (2319) ಶ್ರೀ ಶಿವರಾಮು ಬಿ (ಗಂಡಸಿ) – ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನೇತ್ರಾವತಿ ನದಿ ತಿರುವು ಯೋಜನೆಯ ಪ್ರಸ್ತಾವನೆಯ ಬಗ್ಗೆ ಈ ಹಿಂದೆ ಸರ್ಕಾರ ಹಣ ಒದಗಿಸಿರುತ್ತದೆಯೇ,

ಆ) ಒದಗಿಸಿದ್ದಲ್ಲಿ, ಅದರ ಮೊತ್ತವೆಷ್ಟು,

ಇ) ಪ್ರಸ್ತಾವನೆ ಈಗ ಯಾವ ಹಂತದಲ್ಲಿರುತ್ತದೆ,

ಈ) ಈ ಯೋಜನೆಯಿಂದ ಕಾವೇರಿ ಕೊಳ್ಳಕ್ಕೆ ಲಭ್ಯವಾಗಿರುವ ನೀರಿನ ಮಟ್ಟ ತಾಂತ್ರಿಕವಾಗಿ ದೃಢಪಟ್ಟಿರುತ್ತದೆಯೇ,

ಉ) ಇದ್ದಲ್ಲಿ, ಅದರ ಪ್ರಮಾಣ ಎಷ್ಟು,

ಊ) ಈ ಯೋಜನೆಯನ್ನು ಅನುಷ್ಠಾನಗೊಳಿಸುವ ಆಲೋಚನೆ ಸರ್ಕಾರಕ್ಕೆ ಇದೆಯೇ?

ಶ್ರೀ ಕೆ ಎಸ್ ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು)

ಅ) ಹೌದು

ಆ) ಈ ಹಿಂದೆ ನೇತ್ರಾವತಿ ತಿರುವು ಯೋಜನೆಗಾಗಿ ಈ ಕೆಳಕಂಡಂತೆ ಅನುದಾನವನ್ನು ನಿಗದಿಪಡಿಸಲಾಗಿತ್ತು

ಅ) 2001–02 – ರೂ 100 00 ಲಕ್ಷಗಳು

ಆ) 2002–03 – ರೂ 57 74 ಲಕ್ಷಗಳು

ಇ) 2003–04 – ರೂ 1,000 ಗಳನ್ನು ಸಾಂಕೇತಿಕ ಅನುದಾನವಾಗಿ ನಿಗದಿ ಪಡಿಸಲಾಗಿತ್ತು (54 ಯೋಜನೆಗಳಿಗೆ)

ಇ) ನೇತ್ರಾವತಿ ತಿರುವು ಯೋಜನೆಯ ವಿವರವಾದ ಯೋಜನಾ ವರದಿಯ ತಯಾರಿಕೆ ಕಾರ್ಯವನ್ನು ಭಾರತ ಸರ್ಕಾರದ ಸ್ವಾಮ್ಯ ಸಂಸ್ಥೆಯಾದ ಮೆ॥ ಎನ್ ಆರ್ ಎಸ್ ಎ ಹೈದರಾಬಾದ್ ಸಂಸ್ಥೆಗೆ ವಹಿಸಲಾಗಿದೆ ಮಾಲಾ ಕಾಲುವೆಗಳ ವೈಮಾನಿಕ ಸಮೀಕ್ಷೆ ಕಾರ್ಯವು ಪೂರ್ಣಗೊಂಡಿದ್ದು, ಸೇವಾ ಕಾಲುವೆಗಳ ವೈಮಾನಿಕ ಸಮೀಕ್ಷೆ ಕಾರ್ಯವನ್ನು ಪೂರ್ಣಗೊಳಿಸಬೇಕಾಗಿದೆ

ಈ,ಉ,ಊ) ವಿವರವಾದ ಯೋಜನಾ ವರದಿಯ ತಯಾರಿಕೆ ಕಾರ್ಯವು ಇನ್ನು ಪೂರ್ಣಗೊಂಡಿಲ್ಲದಿರುವುದರಿಂದ, ಈ ಹಂತದಲ್ಲಿ ಯಾವುದೇ ವಿವರಗಳನ್ನು ತಿಳಿಸಲು ಸಾಧ್ಯವಾಗುವುದಿಲ್ಲ

1634 (2106) ಶ್ರೀ ಶಿವಶಂಕರ್ ರೆಡ್ಡಿ ಎನ್ ಹೆಚ್ (ಗೌರಿಬಿದನೂರು) – ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೋಲಾರ ಜಿಲ್ಲೆ ಗೌರಿಬಿದನೂರು ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಗ್ರಾಮೀಣಾಭಿವೃದ್ಧಿ ರಸ್ತೆಗಳ ಕಿ ಮೀ ಎಷ್ಟು,

ಆ) ಈ ರಸ್ತೆಗಳು ತುಂಬಾ ಹದಗೆಟ್ಟಿದ್ದು ಸಂಚಾರಕ್ಕೂ ಸಹ ಯೋಗ್ಯವಾಗಿಲ್ಲದೇ ಜನತೆಯು ತೊಂದರೆಯನ್ನು ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಇ) ಈ ಹದಗೆಟ್ಟ ರಸ್ತೆಗಳ ಕೂಡಲೇ ದುರಸ್ತಿಗೆ ಸರ್ಕಾರವು ಅನುದಾನ ಬಿಡುಗಡೆ ಮಾಡಿ ಈ ಭಾಗದ ಜನತೆಯ ಮತ್ತು ವಾಹನಗಳ ಸಂಚಾರಕ್ಕೆ ಯಾವಾಗ ಅನುಕೂಲ ಮಾಡಿಕೊಡಲಾಗುವುದು?

ಶ್ರೀ ಸಿ ಎಂ ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂ ರಾಜ್ ಸಚಿವರು)

ಅ) ಕೋಲಾರ ಜಿಲ್ಲೆ ಗೌರಿಬಿದನೂರು ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಗ್ರಾಮೀಣ ರಸ್ತೆಗಳ ಉದ್ದ 671 77 ಕಿ ಮೀ

ಆ) ಗ್ರಾಮೀಣ ರಸ್ತೆಗಳ ಅಭಿವೃದ್ಧಿಯ ಅಗತ್ಯತೆ ಕಂಡುಬಂದಿರುತ್ತದೆ

ಇ) ಪ್ರಸ್ತುತ ಸಾಲಿನಲ್ಲಿ 12ನೇ ಹಣಕಾಸು ಆಯೋಗದ ಯೋಜನೆಯಡಿ ಗೌರಿಬಿದನೂರು ತಾಲ್ಲೂಕಿನ ಗ್ರಾಮೀಣ ರಸ್ತೆಗಳ ನಿರ್ವಹಣೆಗಾಗಿ ರೂ 87 78